# CHAPTER-1

**ಅ. 2011–12ನೇ ಸಾಲಿನ ವಾರ್ಷಿಕ ಮುಖ್ಯಾಂಶಗಳು:–**

- ❖ ಇಲಾಖೆಯಲ್ಲಿ ಮೊದಲ ಬಾರಿಗೆ ಫಲಿತಾಂಶ ಚೌಕಟ್ಟು ದಾಖಲೆ ವ್ಯಾಪ್ತಿಗೆ ಒಳಪಡಿಸಿದ 09 ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬಳ್ಳಾರಿ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಶೇಕಡ 100 ರಷ್ಟು ಲೆಕ್ಕಪರಿಶೋಧನಾ ಪ್ರಗತಿಯನ್ನು ಸಾಧಿಸಲಾಗಿದೆ.

- ❖ 2011–12ರ ಸಾಲಿನಲ್ಲಿ 28709 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಯನ್ನು ಸಾಧಿಸಲಾಗಿದೆ. ಕಳೆದ ಸಾಲು 2010–11ರಲ್ಲಿ 27845 ಸಂಘಗಳ ಲೆಕ್ಕಪರಿಶೋಧನೆಯನ್ನು ಸಾಧಿಸಲಾಗಿತ್ತು. ಇದರಿಂದ ಹಿಂದಿನ ಸಾಲಿಗಿಂತ 864 ಸಂಘಗಳ ಹೆಚ್ಚುವರಿ ಲೆಕ್ಕಪರಿಶೋಧನೆ ನಿರ್ವಹಿಸಲಾಗಿದೆ.

## A . HIGHLIGHTS OF THE YEAR 2011-12

- ❖ FOR THE FIRST TIME IN THE HISTORY OF THE DEPARTMENT, NINE DISTRICTS INCLUDED UNDER RESULT FRAME WORK DOCUMENT. BANGALORE RURAL, CHIKKAMAGALUR, UDUPI, KODAGU, DAKSHINA KANNADA, NORTH CANARA, BELLARY, BIDAR AND KOPPAL HAS BEEN ACHIVED 100% AUDIT.

- ❖ DURING THE YEAR 2011-12 THE DEPARTMENT HAS AUDITED 28709 CO-OPERATIVE SOCIETIES. DURING THE PREVIOUS YEAR 2010-11 27845 CP-OPERATIVE SOCIETIES WERE AUDITED. THERE BY 864 CO-OPERATIVE SOCIETIES WERE AUDITED IN EXCESS COMPARED TO PREVIOUS YEAR.

**ಕಛೇರಿ ವಿಳಾಸ: ನಂ.17, ‘’ ಜಯನಿವಾಸ’’ ಶಂಕರ ಮಠ ರಸ್ತೆ, ಬಸವನಗುಡಿ,**

**ಬೆಂಗಳೂರು–560 004.ಫ್ಯಾಕ್ಸ್ ನಂ. 080 –26611030**

**ಇ–ಮೇಲ್ ವಿಳಾಸ: dir-coopaudit@karnataka.gov.in**

**OFFICE ADDRESS: No.17, Jaya Nivas, Shankarmutt Road, Basavanagudi, Bangalore-560004. Fax No. -080-26611030:**

**e-mail address: dir-coopaudit@karnataka.gov.in**

| | |
|---|---|
| ❖ ರಾಜಸ್ವ ವಸೂಲಾತಿಯು 2010–11ನೇ ಸಾಲಿನಲ್ಲಿ ` 3400.21 ಲಕ್ಷಗಳು ವಸೂಲಾತಿ ಆಗಿದ್ದು, ಪ್ರಸಕ್ತ **2011–12ನೇ ಸಾಲಿನಲ್ಲಿ** `.3702.40 ಲಕ್ಷಗಳಿದ್ದು ಹಿಂದಿನ ಸಾಲಿಗೆ ಹೋಲಿಸಿದಲ್ಲಿ `. 302.19 ಲಕ್ಷಗಳಷ್ಟು ರಾಜಸ್ವವು ಹೆಚ್ಚುವರಿ ವಸೂಲಿಯಾಗಿರುತ್ತದೆ. | ❖ REVENUE COLLECTION DURING THE YEAR 2010-11 WAS `.3400.21 LAKHS . DURING THE CURRENT YEAR 2011-12, THE COLLECTION OF REVENUE IS ` **3702.40LAKHS.** THUS, ` 302.19LAKHS REVENUE COLLECTED IN EXCESS COMPARED TO THE COLLECTION OF THE PREVIOUS YEAR. |
| ಸಹಕಾರ ಸಂಘಗಳ 'ಬಾಕಿ ಲೆಕ್ಕಪರಿಶೋಧನೆ'ಗೆ ಒತ್ತು ನೀಡಿ, ಲೆಕ್ಕಪರಿಶೋಧನೆ ಬಾಕಿ ಉಳಿದಿದ್ದ 7224 ಸಹಕಾರ ಸಂಘಗಳ ಪೈಕಿ 1533 ಬಾಕಿ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸಲಾಗಿದೆ. ಪ್ರತಿ ವರ್ಷದ ಲೆಕ್ಕಪರಿಶೋಧನೆ ಒಂದು ಘಟಕದಂತೆ 6597 ಲೆಕ್ಕಪರಿಶೋಧನಾ ಘಟಕಗಳ ಲೆಕ್ಕಪರಿಶೋಧನೆ ಯನ್ನು ಪೂರೈಸಲಾಗಿದೆ.<br><br>2011–12ನೇ ಸಾಲಿನಲ್ಲಿ ಲೆಕ್ಕಪರಿಶೋಧನಾ ವೇಳೆಯಲ್ಲಿ 112 ಪ್ರಕರಣಗಳಲ್ಲಿ ` 564.20 ಲಕ್ಷಗಳ ದುರುಪಯೋಗವನ್ನು ಪತ್ತೆ ಹಚ್ಚಲಾಗಿದೆ. | EMPHASIS HAS BEEN GIVEN FOR "ARREARS AUDIT", OUT OF 7224 ARREARS SOCIETIES, AUDIT OF 1533 ARREARS SOCIETIES ACCOUNTING FOR 6597 AUDIT UNITS HAVE BEEN CONDUCTED, WHERE EACH UNIT IS AN AUDIT OF ONE YEAR.<br><br>DURING AUDIT, MISSAPPROPRIATION OF ` 564.20 LAKHS HAS BEEN DETECTED IN 112 CASES. |

| | |
|---|---|
| ❖ ಮಾನವ ಶಕ್ತಿಯ ಕೊರತೆಯನ್ನು ಸರಿದೂಗಿಸಲು ಇಲಾಖೆಯಿಂದ ನಿವೃತ್ತರಾದ ಅಧಿಕಾರಿ / ಸಿಬ್ಬಂದಿರವರ ಸೇವೆಯನ್ನು ಲೆಕ್ಕಪರಿಶೋಧನೆಗೆ ಹಾಗೂ ಸಹಕಾರ ಸಂಘಗಳ ಉತ್ತಮ ಸೇವೆಗಾಗಿ ಬಳಸಿಕೊಳ್ಳಲಾಗಿದೆ. ಪ್ರಸಕ್ತ 2011–12ನೇ ಸಾಲಿನಲ್ಲಿ ಇಲಾಖೆಯ 26 ನಿವೃತ್ತ ಅಧಿಕಾರಿ / ಸಿಬ್ಬಂದಿಯವರು 450 ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿರುತ್ತಾರೆ. | ❖ TO AUGMENT THE DEPLETING MANPOWER , SERVICES OF RETIRED OFFICERS / EMPLOYEES HAS BEEN USED FOR AUDIT OF CO-OPERATIVE INSTITUTIONS AND TO SERVE THE CO-OPERATIVES BETTER. DURING THE CURRENT YEAR 2011-12, 26 RETIRED OFFICERS / EMPLOYEES OF THE DEPARTMENT HAVE DONE THE AUDIT OF 450 CO-OPERATIVE SOCIETIES. |
| ❖ ಪ್ರಸಕ್ತ ಸಾಲಿನಲ್ಲಿ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಿಗೆ ಹಾಗೂ ಕೇಂದ್ರ ಕಛೇರಿಗೆ ಗಣಕ ಯಂತ್ರಗಳನ್ನು ಒದಗಿಸಲಾಗಿದೆ. ಇಲಾಖೆಯ ಎಲ್ಲಾ ಜಿಲ್ಲಾ ಹಾಗೂ ಉಪ ವಿಭಾಗೀಯ ಕಛೇರಿಗಳಿಗೆ ಬಿ.ಎಸ್.ಎನ್.ಎಲ್. ಮೂಲಕ ಅಂತರ್ಜಾಲ ಸಂಪರ್ಕವನ್ನು ಒದಗಿಸಲಾಗಿದೆ. | ❖ DURING THE CURRENT YEAR. COMPUTERS ALONG WITH INTERNET FACILITY HAS BEEN PROVIDED THROUGH B.S.N.L. TO ALL SUBORDINATE AND HEAD OFFICE |
| ❖ ದುರುಪಯೋಗ ಪ್ರಕರಣಗಳನ್ನು ಪತ್ತೆ ಮಾಡಿದ ಕೂಡಲೇ ಈ ಸಂಬಂಧ ಮುಂದಿನ ಕಾರ್ಯವನ್ನು ಚುರುಕುಗೊಳಿಸಲು, ಮಧ್ಯಂತರ ವರದಿಯನ್ನು ನೀಡಲು ಕ್ರಮವಿಡಲಾಗಿದೆ. | ❖ ACTION HAS BEEN TAKEN TO ISSUE INTERIM REPORTS AS SOON AS A CASE OF MISAPPROPRIATION IS DETECTED, FOR SPEEDIER ACTION. |

# ಅಧ್ಯಾಯ–2

# CHAPTER-2

## 1.1 ಪರಿಚಯ:

ಸಹಕಾರ ಸಂಘಗಳ ಸ್ವತಂತ್ರ, ನಿಷ್ಪಕ್ಷ ಹಾಗೂ ಶಾಸನಬದ್ಧ ಲೆಕ್ಕಪರಿಶೋಧನೆಗಾಗಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯು ಸಹಕಾರ ಇಲಾಖೆಯಿಂದ 1977ರಲ್ಲಿ ಬೇರ್ಪಟ್ಟು ಅಸ್ತಿತ್ವಕ್ಕೆ ಬಂದು, ಒಂದು ಪ್ರಮುಖ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

## 1.2 ಇಲಾಖೆಯ ಪ್ರಮುಖ ಕಾರ್ಯಗಳು;

ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(1) ರಲ್ಲಿ ಸೂಚಿಸಿರುವಂತೆ ಎಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸುವುದು ಇಲಾಖೆಯ ಪ್ರಮುಖ ಕರ್ತವ್ಯವಾಗಿರುತ್ತದೆ. ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕಲಂ 63ಕ್ಕೆ ಮುಖ್ಯವಾದ ತಿದ್ದುಪಡಿಯನ್ನು ಮಾಡಿರುತ್ತದೆ. ಅದರಂತೆ ಕಲಂ 63(1) ಎಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯು ವರ್ಷಕ್ಕೊಮ್ಮೆಯಾದರೂ ಸಹಕಾರ ಸಂಘಗಳ ನಿರ್ದೇಶಕರಿಂದ ಅಥವಾ ಅವರಿಂದ ಪ್ರಾಧಿಕಾರ ಪಡೆದ ವಿಶೇಷವಾಗಿ ಅಥವಾ ಸಾಮಾನ್ಯ ಆದೇಶವನ್ನು ಈ ಸಂಬಂಧ ಲಿಖಿತವಾಗಿ ಪಡೆದ ವ್ಯಕ್ತಿಯಿಂದ ನಿರ್ವಹಿಸಿಕೊಳ್ಳತಕ್ಕದ್ದಾಗಿರುತ್ತದೆ.

## 1.1 Introduction:

Consequent upon the recommendation of the Public Accounts Committee the Department of Cooperative Audit has come into existence as an independent department in the year 1977, after its bifurcation from Co-operation Department by means of a statute with the objective of ensuring free, fair and independent statutory audit of all co-operative institutions in the state and is functioning as a major department.

## 1.2 Important functions of the department:

As per Section 63(1) of Karnataka Co-operative Societies Act 1959, the main function of the department is to conduct audit of accounts of all Co-operative Institutions and as per section 63(1) " Every Co-operative society shall get its accounts audited at least once in each year by The Director of Co-operative Audit or by a person authorized by him by general or special order in writing in his behalf''.

- ಇಲಾಖೆಯು ಪ್ರತಿ ವರ್ಷ ಸಹಕಾರ ಸಂಘಗಳ ಸಕಾಲಿಕ ಲೆಕ್ಕಪರಿಶೋಧನೆಗಾಗಿ ವೈಯಕ್ತಿಕ ವಾರ್ಷಿಕ ಲೆಕ್ಕಪರಿಶೋಧನಾ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ವರ್ಷದ ಮೊದಲ ಎರಡು ತ್ರೈಮಾಸಿಕಗಳಲ್ಲಿ ಆದಾಯ ತೆರಿಗೆ ಕಾಯ್ದೆ ಕಲಂ 44 ಎಬಿ ವ್ಯಾಪ್ತಿಯ ಹಾಗೂ ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯ್ದೆ, 1949ರ ವ್ಯಾಪ್ತಿಗೆಒಳಪಡುವ ಹಾಗೂ ಇತರೆ ಪ್ರಮುಖ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಪೂರೈಸಲಾಗುತ್ತಿದೆ ಹಾಗೂ ಎಲ್ಲಾ ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ವಾರ್ಷಿಕ ಲೆಕ್ಕಪರಿಶೋಧನಾ ಕಾರ್ಯಕ್ರಮದಂತೆ ಪೂರೈಸಲಾಗುತ್ತಿದೆ.

- The Department prepares an individual annual audit programme every year to ensure timely audit of all the co-operative institutions. Audit of key institutions which come under the preview of section 44 AB of Income Tax Act, Banking Regulation Act 1949 and all other key institutions are taken up during the first two quarters of the year. All the co-operative institutions are being audited according to the Annual Audit Programmes.

**ಸಹಕಾರ ಸಂಘಗಳ ಲೆಕ್ಕಪರಿಶೋಧನೆಯ ವ್ಯಾಪ್ತಿ:**

ಸಹಕಾರ ಸಂಘಗಳ ಲೆಕ್ಕಪರಿಶೋಧನೆಯು ಸುಸ್ತಿ ಸಾಲಗಳು ಇದ್ದಲ್ಲಿ ಅವುಗಳ ಪರೀಕ್ಷೆ, ನಗದು ಶಿಲ್ಕು ಮತ್ತು ಭದ್ರತೆಗಳ ಪರಿಶೀಲನೆ, ಆಸ್ತಿಗಳ ಮತ್ತು ಜವಾಬ್ದಾರಿಗಳ ಮೌಲ್ಯೀಕರಣ, ಸಂಘದ ಕಾರ್ಯ ಚಟುವಟಿಕೆಗಳು ಮತ್ತು ಸಂಘದ ಇನ್ನಿತರೆ ನಿಗದಿತ ವಿವರಗಳ ಪರೀಕ್ಷೆಯನ್ನು ಒಳಗೊಂಡಿರುತ್ತದೆ.

ಹೊಸ ತಿದ್ದುಪಡಿ ಸಂಖ್ಯೆ: ಸಿಒ:19:ಸಿಎಲ್ಎಂ:2009(ಪಿ–1) ಬೆಂಗಳೂರು ದಿನಾಂಕ 3ನೇ ನವೆಂಬರ್ 2009 ರಂತೆ ಉಪ ಕಲಂ(3)ಕ್ಕೆ ಲೆಕ್ಕಪರಿಶೋಧಕರು ಪೂರ್ವಾಗ್ರಹಿತರಾಗದೆ ಪರಿಶೀಲಿಸಬೇಕಾಗುತ್ತದೆ.

**Scope of Co-operative Audit**

- The co-operative audit includes an examination of over due debts if any, the verification of the cash balance and securities, valuation of the assets and liabilities and an examination of the working and other prescribed particulars of the society.

✓ As per new amendment Number: CO 19 CLM 2009 (P-1), Bengaluru, Dated 3rd November, 2009 –Without prejudice to provisions of sub-section (3), the auditor shall inquire –

| | |
|---|---|
| ✓ ಸಹಕಾರ ಸಂಘಗಳು ನೀಡಿರುವ ಸಾಲ ಮತ್ತು ಮುಂಗಡಗಳು ಸರಿಯಾದ ನಿಶ್ಚಿತ ಭದ್ರತೆ ಆಧಾರವನ್ನು ಪಡೆದು ನೀಡಲಾಗಿದೆಯೇ ಹಾಗೂ ಅವುಗಳು ಸಾಲ ಮತ್ತು ಮುಂಗಡಗಳಿಗೆ ಸರಿಯಾಗಿದೆಯೇ? ಮತ್ತು ಅವುಗಳಿಗಾಗಿ ಮಾಡಿಕೊಂಡಿರುವ ಒಪ್ಪಂದಗಳು ಸಹಕಾರ ಸಂಘದ ಅಥವಾ ಅದರ ಸದಸ್ಯರುಗಳ ಹಿತಾಸಕ್ತಿಗೆ ವಿರೋಧವಾಗಿದೆಯೇ? | ✓ Whether loans and advances made by the co-operative society on the basis of security have been properly secured and whether terms on which they have been made are not prejudicial to the interests of the co-operative society or its members; |
| ✓ ಸಹಕಾರ ಸಂಘದ ಪುಸ್ತಕದಲ್ಲಿ ನಮೂದಿತ ವ್ಯವಹಾರಗಳು ಸಹಕಾರ ಸಂಘದ ಹಿತಾಸಕ್ತಿಗೆ ವಿರೋಧವಾಗಿದೆಯೇ? | ✓ Whether transactions of the co-operative society which are represented merely by book entries are not prejudicial to the interests of the co-operative society; |
| ✓ ವೈಯಕ್ತಿಕ ಖರ್ಚುಗಳನ್ನು ರಾಜಸ್ವ ಖಾತೆಗೆ ಹಾಕಲಾಗಿದೆಯೇ? | ✓ Whether personal expenses have been charged to revenue account; |
| ✓ ಸಹಕಾರ ಸಂಘದ ಪುಸ್ತಕದಲ್ಲಿ ಹಾಗೂ ಪತ್ರದಲ್ಲಿ ನಮೂದಿಸುವ ಯಾವುದಾದರೂ ಷೇರುಗಳ ನಗದು ಮೊತ್ತ ವಿತರಿಸಲಾಗಿದೆಯೇ? ನಗದನ್ನು ವಾಸ್ತವವಾಗಿ ವಿತರಣೆ ಸಂದರ್ಭದಲ್ಲಿ ಸ್ವೀಕರಿಸಲಾಗಿದೆಯೇ? ಸ್ವೀಕರಿಸದಿದ್ದಲ್ಲಿ ಲೆಕ್ಕಪುಸ್ತಕಗಳಲ್ಲಿ ಆಸ್ತಿ-ಋಣ ಪಟ್ಟಿಯಲ್ಲಿನ ಸ್ಥಿತಿಯು ಪಟ್ಟಿಯಲ್ಲಿ ನಿಯತವಾಗಿರುವ ಹಾಗೂ ದಾರಿ ತಪ್ಪಿಸದಂತೆ ಇರುವುದೇ? | ✓ Where it is stated in the books and papers of the co-operative society that any shares have been allotted for cash, whether cash has actually been received in respect of such allotment, and if no cash has actually been so received, whether the position as stated in the account books and the Balance-sheet is correct, regular and not misleading |
| ✓ ಯಾವುದೇ ವಿಶೇಷ ಪ್ರಕರಣ ಅಥವಾ ವಿಷಯವನ್ನು ವಿಚಾರಣೆಗಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್‌ನಿಂದ ವಹಿಸಲ್ಪಟ್ಟಿರುವುದನ್ನು ಸರಿಯಾಗಿ ವಿಚಾರಣೆ ನಿರ್ವಹಿಸಲಾಗಿದೆಯೇ ಮತ್ತು ಅದರ ವರದಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್‌ಗೆ ಸಲ್ಲಿಸಲಾಗಿದೆಯೇ? | ✓ Whether any special issue or subject matter referred to for enquiry by the Reserve Bank or the National Bank has been duly enquired into and report thereof is submitted to the Reserve Bank or the National Bank as the case may be. |
| ಲೆಕ್ಕಪರಿಶೋಧಕರು ಅವರಿಂದ ಪರಿಶೀಲಿಸಲ್ಪಟ್ಟ ಲೆಕ್ಕಗಳ ಮತ್ತು ಆಸ್ತಿ-ಋಣ ಪಟ್ಟಿ, | ✓ The Auditor shall make a report to the members of the co-operative society on the accounts examined by him and on every balance sheet and profit and loss account |

ಲಾಭ–ನಷ್ಟ ಖಾತೆ ಮತ್ತು ಅವುಗಳಿಗೆ ಪೂರಕವಾಗಿ ಬೇಕಾದ ದಾಖಲೆಗಳನ್ನು ಆಸ್ತಿ–ಋಣ ಪಟ್ಟಿ, ಲಾಭ–ನಷ್ಟ ತ:ಖ್ತೆಗಳಿಗೆ ಜೋಡಿಸುವುದರ ಮೇಲೆ ಒಂದು ವರದಿಯನ್ನು ಸಹಕಾರ ಸಂಘದ ಸದಸ್ಯರುಗಳಿಗೆ ಸಹಕಾರ ಸಂಘದ ವಾರ್ಷಿಕ ಸಾಮಾನ್ಯ ಸಭೆಯಲ್ಲಿರುವಂತೆ ಅವರು ವರದಿಯಲ್ಲಿ ಆತನ ಅಭಿಪ್ರಾಯ ಹಾಗೂ ಆತನು ಪಡೆದ ಉತ್ತಮ ಮಾಹಿತಿಯಂತೆ ಮತ್ತು ಪಡೆದ ಸ್ಪಷ್ಟೀಕರಣಗಳಂತೆ ಲೆಕ್ಕ ಖಾತೆಯಲ್ಲಿನ ಅವಶ್ಯ ಮಾಹಿತಿಗಳನ್ನು ಸರಿಯಾದ ಮತ್ತು ಸ್ಪಷ್ಟ ಅಭಿಪ್ರಾಯವಾಗಿರುತ್ತದೆಂದು ಸ್ಪಷ್ಟೀಕರಿಸಬೇಕಾಗಿರುತ್ತದೆ.

ಅ) ಆಸ್ತಿ–ಋಣ ಪಟ್ಟಿಗೆ ಸಂಬಂಧಿಸಿದಂತೆ ವರ್ಷಾಂತ್ಯಕ್ಕೆ ಸಹಕಾರ ಸಂಘದ ವ್ಯವಹಾರಗಳ ಸ್ಥಿತಿ.

ಆ) ಲಾಭ ಮತ್ತು ನಷ್ಟ ಖಾತೆಗೆ ಸಂಬಂಧಿಸಿದಂತೆ ಆ ಸಂಬಂಧಿಸಿದ ವರ್ಷದ ಲಾಭ ಅಥವಾ ನಷ್ಟದ ಬಗ್ಗೆ.

- ✓ ಲೆಕ್ಕಪರಿಶೋಧಕರ ವರದಿಯು ಕೆಳಕಂಡವುಗಳನ್ನೂ ಸ್ಪಷ್ಟಪಡಿಸಬೇಕಾಗಿರುತ್ತದೆ.

  ಅ) ಅವರ ಅತ್ಯುತ್ತಮ ಜ್ಞಾನ ಮತ್ತು ನಂಬಿಕೆಗಳಂತೆ ಲೆಕ್ಕಪರಿಶೋಧನೆಗೆ ಅಗತ್ಯ ಎಲ್ಲಾ ಮಾಹಿತಿ ಹಾಗೂ ಸ್ಪಷ್ಟೀಕರಣಗಳನ್ನು ಪಡೆಯಲಾಗಿದೆಯೇ?

  ಆ) ಅವರ ಅಭಿಪ್ರಾಯದಲ್ಲಿ, ಪುಸ್ತಕಗಳ ಪರಿಶೀಲನೆಯಿಂದ ಕಂಡುಬಂದಂತೆ ಸಹಕಾರ ಸಂಘವು ಸಮರ್ಪಕ ಲೆಕ್ಕಪುಸ್ತಕಗಳನ್ನು ಇಡಲಾಗಿದೆಯೇ? ಮತ್ತು ಅವರ ಲೆಕ್ಕಪರಿಶೋಧನೆ ಸಲುವಾಗಿ ಸರಿಯಾದ ಸಮರ್ಪಕ ರಿಟರ್ನ್‌ಗಳನ್ನು ಶಾಖೆಗಳಿಂದ ಅಥವಾ ಸಹಕಾರ ಸಂಘದ ಕಛೇರಿಯಿಂದ ಅವರು ಭೇಟಿ ನೀಡದಿದ್ದಾಗ್ಯೂ ಪಡೆಯಲಾಗಿದೆಯೇ?

and on every other document required to be part of or annexed to the Balance sheet or profit and loss account, which are placed before the co-operative society in general meeting during his tenure of office, and the report shall state whether, in his opinion and to the best of his information and according to the explanations given to him, the said accounts give the information required by the manner so required and give a true and fair view:-

a. In the case of the Balance sheet, of the state of the co-operative society's affairs end of the year; and
b. In the case of the profit and loss account, of the profit or loss for the year.

- ✓ The Auditor's report shall also state –
  a. Whether he has obtained all the information and explanations which to the best of him knowledge and belief were necessary for the purpose of his audit
  b. Whether in his opinion, proper books of accounts have been kept by the co-operative society so far as appears from this examination of those books, and proper returns adequate for the purpose of his audit have been received from branches or offices of the co-operative society not visited by him;

ಇ) ಸಹಕಾರ ಸಂಘಗಳ ಲೆಕ್ಕಪರಿಶೋಧಕರಲ್ಲದೆ ಬೇರೆ ವ್ಯಕ್ತಿಯಿಂದ ಯಾವುದಾದರೂ ಶಾಖೆಯ ಲೆಕ್ಕಗಳ ಮೇಲಿನ ವರದಿಯನ್ನು ಅವರಿಗೆ ಕಳುಹಿಸಲಾಗಿದೆಯೇ? ಮತ್ತು ಅದನ್ನು ಲೆಕ್ಕಪರಿಶೋಧಕರ ವರದಿ ತಯಾರಿಕೆಯಲ್ಲಿ ಹೇಗೆ ನಿಭಾಯಿಸಲಾಗಿದೆ.

ಈ) ಆಸ್ತಿ–ಋಣ ತ:ಖ್ತೆ ಮತ್ತು ಲಾಭ–ನಷ್ಟ ತ:ಖ್ತೆಯನ್ನು ಪರಿಶೀಲಿಸಿರುವುದು ಮತ್ತು ವರದಿಸಲ್ಪಡುವುದು, ಸಹಕಾರ ಸಂಘದ ಲೆಕ್ಕಪುಸ್ತಕಗಳಿಗೆ ಮತ್ತು ರಿಟರ್ನ್ಸ್‌ಗಳಿಗೆ (ಲೆಕ್ಕಗಳ ಸಲ್ಲಿಸುವಿಕೆಗಳಿಗೆ) ಕರಾರುವಕ್ಕಾಗಿದೆಯೇ?

✓ ಉಪ ಕಲಂ (13)ರ (ಎ) ಮತ್ತು (ಬಿ)ರಲ್ಲಿ ಉಲ್ಲೇಖಿಸಿರುವ ಯಾವುದಾದರೂ ವಿಷಯಗಳ ಅಥವಾ ಉಪ ಕಲಂ 14ರ (ಎ)(ಬಿ)(ಸಿ) ಮತ್ತು (ಡಿ)ರಲ್ಲಿನ ಕ್ಲಾಸ್‌ಗಳಿಗೆ ಲೆಕ್ಕಪರಿಶೋಧಕರ ವರದಿಯಲ್ಲಿ ಉತ್ತಮ ನಕಾರಾತ್ಮಕ ಅಥವಾ ಅರ್ಹತಾದಾಯಕ ಅಭಿಪ್ರಾಯ (ಪರಿಶೀಲನಾಂಶ) ಇದ್ದಲ್ಲಿ ಇದಕ್ಕೆ ಕಾರಣವನ್ನು ನೀಡಬೇಕಿರುತ್ತದೆ.

**ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 1959 ಮತ್ತು ನಿಯಮ 1960ರಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಇರುವ ಅಧಿಕಾರಗಳು ಹಾಗೂ ಜವಾಬ್ದಾರಿಗಳು ಕೆಳಕಂಡಂತಿರುತ್ತವೆ.**

c. Whether the report on the accounts of any branch office audited by a person other than the co-operative society's auditor has been forwarded to him and how he has dealt with the same in preparing the auditor's report;

d. Whether the co-operative society's balance sheet and profit and loss account dealt with by the report are in agreement with the books of account and returns.

✓ Whether any of the matters referred to in clauses (a) and (b) of sub-section (13) or in clauses (a), (b), (c) and (d) of sub-section (14) is answered in the negative or with a qualifying observation, the auditor's report shall state the reason for the answer.

✓ **B. The Powers and responsibilities of The Director of Co-operative Audit as envisaged under the Karnataka Co-operative Societies Act 1959 and Rule 1960 are as follows.**

**ಅಧಿಕಾರಗಳು:**

- ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಎಲ್ಲಾ ವೇಳೆಯಲ್ಲಿ, ಸಂಸ್ಥೆಯ ಎಲ್ಲಾ ಲೆಕ್ಕಪುಸ್ತಕಗಳನ್ನು, ದಾಖಲಾತಿಗಳನ್ನು, ನಗದು, ಭದ್ರತೆಗಳು, ಇತ್ಯಾದಿಗಳನ್ನು ಪರಿಶೀಲಿಸಲು ಮತ್ತು ಅವುಗಳನ್ನು ಪರಿಶೀಲನೆಗೆ ಹಾಜರುಪಡಿಸುವಂತೆ "ಸಮನ್ಸ್" ಮಾಡಲು ಅಧಿಕಾರ ಹೊಂದಿರುತ್ತಾರೆ.
- ಸಂಸ್ಥೆಯ ವ್ಯವಹಾರ, ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು, ಆರ್ಥಿಕ ತ:ಖ್ತೆಗಳನ್ನು ಮತ್ತು ಅವಶ್ಯವಿರುವ ಇತರೇ ತ:ಖ್ತೆಗಳನ್ನು ಹಾಜರುಪಡಿಸುವಂತೆ ಪ್ರತಿಯೊಂದು ಸಹಕಾರ ಸಂಸ್ಥೆಗೆ ನಿರ್ದೇಶನ ನೀಡುವ ಅಧಿಕಾರವನ್ನು ನಿರ್ದೇಶಕರು ಹೊಂದಿರುತ್ತಾರೆ.
- ದಾಖಲಾತಿಗಳ ಹಾಗೂ ಸಂಬಂಧಿತ ವ್ಯಕ್ತಿಗಳ ಪರೀಕ್ಷೆ ನಂತರ ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ತೆಗೆದುಹಾಕಲು ಅಥವಾ ಸ್ಥಿರೀಕರಿಸಲು ಆದೇಶ ನೀಡುವ ಅಧಿಕಾರ ನಿರ್ದೇಶಕರು ಹೊಂದಿರುತ್ತಾರೆ.
- ರಾಜ್ಯ ಸರ್ಕಾರವು ಅವಶ್ಯವೆನಿಸಿದಲ್ಲಿ, ಮರು ಲೆಕ್ಕಪರಿಶೋಧನೆಗೆ ಆದೇಶಿಸಬಹುದಾಗಿದ್ದು, ಲೆಕ್ಕಪರಿಶೋಧನೆಗೆ ಅನ್ವಯವಾಗುವ ಕಾಯ್ದೆ ಮತ್ತು ನಿಯಮಗಳು ಮರು ಲೆಕ್ಕಪರಿಶೋಧನೆಗೂ ಅನ್ವಯಿಸುತ್ತವೆ
- ಲೆಕ್ಕಪರಿಶೋಧನೆಯಲ್ಲಿನ ಲೋಪದೋಷಗಳನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಅಳವಡಿಸುವ ಸಲುವಾಗಿ, ಯಾವುದೇ ಸಹಕಾರ ಸಂಘದ, ಯಾವುದೇ ಸಾಲಿನ ಲೆಕ್ಕಪರಿಶೋಧನೆಯಾಗಿರುವ ಲೆಕ್ಕಪುಸ್ತಕಗಳನ್ನು ಮರು ಪರೀಕ್ಷಿಸಲು ಅಥವಾ ಪರಿಶೀಲಿಸಲು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ
- ಸಹಕಾರ ಸಂಘದಿಂದ ಸರ್ಕಾರಕ್ಕೆ ಬಾಕಿ ಇರುವ ಲೆಕ್ಕಪರಿಶೋಧನಾ ಶುಲ್ಕ/ವೆಚ್ಚವನ್ನು, ಜಮೀನು ಕಂದಾಯ ವಸೂಲಿಸುವ ರೀತಿಯಲ್ಲಿ ವಸೂಲಿಸಲು ನಿರ್ದೇಶಕರು ಪ್ರಮಾಣ ಪತ್ರವನ್ನು ನೀಡಬಹುದಾಗಿರುತ್ತದೆ.

**Powers:**

- The Director of Co-operative Audit has at all times have access to all the Books of Accounts, Documents, Cash, Securities etc., and may issue summons to produce the same.
- The Director may call upon any co-operative institution to furnish such information with regard to the transaction and working of the society and to furnish financial statements and such other statements.
- The Director may order for deletion or confirmation of the audit objection after examining the documents and the person concerned.
- The State Government if necessary may order for re-audit. The provisions of the Act and Rules applicable to the audit shall also apply to such re-audit.
- The Director has the power to re-examine or to re-verify the audited accounts of any co-operative society pertaining to any year and to incorporate the lapses in the next audit report.
- He is empowered to issue certificate to recover the Audit fee/Audit cost due from a co-operative society to the government in the same manner as arrears of land revenue.

| | |
|---|---|
| • ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಉದ್ಭವಿಸುವ ವಿಷಯಗಳಿಗೆ ಅನ್ವಯಿಸುವಂತೆ, ಕಾಯ್ದೆ ಕಲಂ 109 ರಡಿ ಅಪರಾಧವೆಸಗುವ ವ್ಯಕ್ತಿಯ ವಿರುದ್ಧ ಅಭಿಯೋಗ ನಡೆಸಲು ನಿರ್ದೇಶಕರು ಮಂಜೂರಾತಿ ನೀಡಲು ಅಧಿಕಾರ ಹೊಂದಿರುತ್ತಾರೆ. | • He has the power to accord sanctions to prosecute a person who has committed some of the offences listed under section 109 of the Act in respect of matters arising out of audit. |
| • ಸಹಕಾರ ಸಂಘಗಳ ಆರ್ಥಿಕ ತ:ಖ್ತೆಗಳಲ್ಲಿ ಯಾವುದಾದರೂ ಮಾರ್ಪಾಡು ಇದ್ದಲ್ಲಿ, ಈ ಮಾರ್ಪಾಡು ಮಾಡಲು ನಿರ್ದೇಶಕರು ಅಧಿಕಾರವನ್ನು ಹೊಂದಿರುತ್ತಾರೆ. ಅಂತಹ ಮಾರ್ಪಾಡು ಅಂತಿಮ ಹಾಗೂ ಸಹಕಾರ ಸಂಘಕ್ಕೆ ಅವಶ್ಯ ಪಾಲನೀಯವಾಗಿರುತ್ತದೆ | • In addition he also has the power to make modifications, if any, in the statement of accounts, which shall be final and binding on the society. |
| • ರಾಜ್ಯ ಸರ್ಕಾರದ ಪೂರ್ವಾನುಮತಿಯೊಂದಿಗೆ, ಲೆಕ್ಕಪರಿಶೋಧನಾ ಶುಲ್ಕದ ಪ್ರಮಾಣವನ್ನು ನಿಗದಿಪಡಿಸಲು ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ. | • The Director, with the prior approval of the State Government, has the power to fix the scale of audit fee. |
| • ಸಂಘದಿಂದ ಸರ್ಕಾರಕ್ಕೆ ಬಾಕಿ ಇರುವ ಲೆಕ್ಕಪರಿಶೋಧನಾ ಶುಲ್ಕ/ವೆಚ್ಚವನ್ನು ಸಂಬಂಧಪಟ್ಟ ಆರ್ಥಿಕ ನೆರವು ನೀಡುವ ಸಂಸ್ಥೆಗೆ ಪಾವತಿಸಲು ನಿರ್ದೇಶಕರು ಸೂಚಿಸಬಹುದಾಗಿದೆ. | • The Director may call upon the financing bank of the concerned co-operative society to remit the outstanding amount of audit fee / audit cost to the Government. |
| • ಅಧಿಕಾರಿ ಅಥವಾ ಲೆಕ್ಕಪರಿಶೋಧನೆ ನಡೆಸುವ ವ್ಯಕ್ತಿಯು ಸಂಘದ ಅಂತಹ ಪುಸ್ತಕಗಳು ಅಥವಾ ಆಸ್ತಿಯನ್ನು ನಿಗದಿತ ರೀತಿಯಲ್ಲಿ ಮತ್ತು ಅವಧಿಯವರೆಗೆ ತನ್ನ ವಶಕ್ಕೆ ತೆಗೆದುಕೊಳ್ಳಲು ಮತ್ತು ವಶದಲ್ಲಿಟ್ಟುಕೊಳ್ಳಲು ಅಧಿಕಾರವನ್ನು ಹೊಂದಿರುತ್ತಾರೆ. | • An officer or person conducting the audit has got power to seize and impound such books or property in such manner and for such period as may be prescribed. |

**ಹೊಣೆಗಾರಿಕೆಗಳು:**

ಪ್ರತಿಯೊಂದು ಸಹಕಾರ ಸಂಘದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸುವುದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ. ಅದರಂತೆ ಕಲಂ 63(1) ಎಲ್ಲಾ ಸಹಕಾರ ಸಂಘಗಳು ಲೆಕ್ಕಪರಿಶೋಧನೆಯನ್ನು ವರ್ಷಕ್ಕೊಮ್ಮೆಯಾದರೂ ಸಹಕಾರ ಸಂಘಗಳ ನಿರ್ದೇಶಕರಿಂದ ಅಥವಾ ಅವರಿಂದ ಪ್ರಾಧಿಕಾರ ಪಡೆದ ವಿಶೇಷವಾಗಿ ಅಥವಾ ಸಾಮಾನ್ಯ ಆದೇಶವನ್ನು ಈ ಸಂಬಂಧ ಲಿಖಿತವಾಗಿ ಪಡೆದ ವ್ಯಕ್ತಿಯಿಂದ ನಿರ್ವಹಿಸಿಕೊಳ್ಳತಕ್ಕದ್ದಾಗಿರುತ್ತದೆ.

- ಲೆಕ್ಕಪರಿಶೋಧನಾ ವರದಿಗಳನ್ನು ಸಹಕಾರ ಸಂಘಕ್ಕೆ ಮತ್ತು ಸಂಬಂಧಿಸಿದವರಿಗೆ ಕಳುಹಿಸಲು ಹಾಗೂ ಲೆಕ್ಕಪರಿಶೋಧನೆಯ ಫಲಿತಾಂಶವನ್ನು ತಿಳಿಸಲು ಬದ್ಧರಾಗಿರುತ್ತಾರೆ.
- ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ ಹಾಗೂ ಮಾಹಿತಿಗಳನ್ನು ಪಡೆಯಲು ಮತ್ತು ಅಂತಹ ಸಭೆಯಲ್ಲಿ ಭಾಗವಹಿಸಲು ನಿರ್ದೇಶಕರು ಹಕ್ಕುಳ್ಳವರಾಗಿರುತ್ತಾರೆ.

**Responsibilities:**

It is the responsibility of the Director of Co-operative Audit, to audit the accounts of every co-operative society as per section63(1), "Every co-operative society shall get its accounts audited at least once in each year by the Director of co-operative audit or by a person authorized by him by general or special order in writing in his behalf."

- The Director of Co-operative Audit has to send the copies of the audit report and to communicate the result of Audit to the society and to the concerned authorities.
- He has the right to receive all notices and communications relating to the Annual General Meeting and to attend the same.

# ಅಧ್ಯಾಯ-3
# CHAPTER-3

## ಆಡಳಿತ ಮತ್ತು ಸಿಬ್ಬಂದಿ:

ಇಲಾಖೆಗೆ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ 1658 ಇದ್ದು, ಅವುಗಳಲ್ಲಿ 1513 ಖಾಯಂ ಹುದ್ದೆಗಳು ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 441 ರನ್ವಯ ಸೃಜಿಸಲಾದ 145 ತಾತ್ಕಾಲಿಕ ಹುದ್ದೆಗಳಾಗಿವೆ. ಇಲಾಖೆಯ 31 ವಿವಿಧ ವೃಂದದ ಅಧಿಕಾರಿ / ಸಿಬ್ಬಂದಿಗಳು ಬೇರೆ ಇಲಾಖೆ ಹಾಗೂ ಸಂಸ್ಥೆಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ, ದಿನಾಂಕ 31-12-2011 ರಂದು ಒಟ್ಟು 656 ವಿವಿಧ ವರ್ಗದ ಹುದ್ದೆಗಳು ಖಾಲಿ ಇರುತ್ತವೆ.

**(ಎ) ದಿನಾಂಕ 31-12-2011 ರಲ್ಲಿದ್ದಂತೆ ಭರ್ತಿಯಾದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ನೌಕರರ ವಿವರ ಹಾಗೂ ಗಂಡು ಹೆಣ್ಣು ನೌಕರರ ಮಾಹಿತಿ**

| ಕ್ರಮ ಸಂಖ್ಯೆ | ಹುದ್ದೆಯ ವರ್ಗ | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆಗಳಲ್ಲಿ | | | |
|---|---|---|---|---|---|---|
| | | | ಗಂಡು | ಹೆಣ್ಣು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| 1. | "ಎ" | 51 | 40 | 5 | 11 | 3 |
| 2. | "ಬಿ" | 95 | 66 | 8 | 11 | 3 |
| 3. | "ಸಿ" | 1290 | 592 | 125 | 121 | 44 |
| 4. | "ಡಿ" | 222 | 120 | 46 | 37 | 7 |
| | **ಒಟ್ಟು** | **1658** | **818** | **184** | **180** | **57** |

**(ಬಿ) 2011 ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ಹೊಂದಿದ ನೌಕರರ ವಿವರ:**

## Administration and Establishment:

A total of 1658 post of various cadres are sanctioned to this Department, of which 1513 are permanent posts and 145 posts are sanctioned under rule 441 of KCSR. 31 officers/officials of the Department are working on deputation in different Departments, Institutions and Corporations. As on 31-12-2011 a total of 656 of various cadres of post are vacant in this Department.

(a) **The Details of Scheduled Caste & Scheduled Tribe and male & female employees among the filled post as on 31-12-2011 is as follows**.

| Sl. no | Category of posts | Sanctioned post | Among filled post | | | |
|---|---|---|---|---|---|---|
| | | | Male | Female | SC | ST |
| 1 | "A" | 51 | 40 | 5 | 11 | 3 |
| 2 | "B" | 95 | 66 | 8 | 11 | 3 |
| 3 | "[1]C" | 1290 | 592 | 125 | 121 | 44 |
| 4 | "D" | 222 | 120 | 46 | 37 | 7 |
| | **Total** | **1658** | **818** | **184** | **180** | **57** |

2011 ನೇ ವರ್ಷದಲ್ಲಿ 64 ಅಧಿಕಾರಿ / ಸಿಬ್ಬಂದಿಗಳು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ಇಬ್ಬರು ನೌಕರರು ಸ್ವಯಂನಿವೃತ್ತಿ ಹೊಂದಿರುತ್ತಾರೆ ಹಾಗೂ ಇಬ್ಬರು ನೌಕರರು ನಿಧನ ಹೊಂದಿರುತ್ತಾರೆ

**(ಸಿ) 2011 ನೇ ಕ್ಯಾಲೆಂಡರ್ ವರ್ಷದಲ್ಲಿ ಬಾಹ್ಯಮೂಲಗಳಿಂದ ಹುದ್ದೆಗಳನ್ನು ಭರ್ತಿ ಮಾಡಿದ ವಿವರ:**

ಈ ಇಲಾಖೆಯಲ್ಲಿ ಖಾಲಿಯಿರುವ ಬೆರಳಚ್ಚುಗಾರರ, ವಾಹನ ಚಾಲಕರ ಮತ್ತು ಗ್ರೂಪ್ "ಡಿ" ನೌಕರರ ಹುದ್ದೆಗಳನ್ನು ನೇಮಕಾತಿ ಮುಖಾಂತರ ಭರ್ತಿ ಮಾಡದೆ, ಬಾಹ್ಯಮೂಲಗಳಿಂದ ಭರ್ತಿ ಮಾಡುವಂತೆ ಸರ್ಕಾರದ ನಿರ್ದೇಶನವಿರುತ್ತದೆ. ಇದರನ್ವಯ ಈ ಇಲಾಖೆಯಲ್ಲಿ ಖಾಲಿಯಿದ್ದ ಬೆರಳಚ್ಚುಗಾರರು, ವಾಹನ ಚಾಲಕರ ಮತ್ತು ಗ್ರೂಪ್ "ಡಿ" ನೌಕರರ ಹುದ್ದೆಗಳಲ್ಲಿ 42 ಹುದ್ದೆಗಳನ್ನು ಬಾಹ್ಯಮೂಲಗಳಿಂದ ಭರ್ತಿ ಮಾಡಲು ಮತ್ತು ಈ ಸಂಬಂಧದ ವೆಚ್ಚಗಳನ್ನು "ಸಾಮಾನ್ಯ ವೆಚ್ಚ" ಗಳಡಿ ಭರಿಸಲು ಸರ್ಕಾರ ಅನುಮೋದನೆ ನೀಡಿರುತ್ತದೆ. ಇದರಂತೆ 2010 ನೇ ವರ್ಷದಲ್ಲಿ 35 ಬೆರಳಚ್ಚುಗಾರರ, 03 ವಾಹನ ಚಾಲಕರ ಮತ್ತು 04 ಗ್ರೂಪ್ "ಡಿ" ನೌಕರರ ಹುದ್ದೆಗಳನ್ನು ಬಾಹ್ಯಮೂಲಗಳಿಂದ ಭರ್ತಿ ಮಾಡಿಕೊಂಡು ಈ ಹುದ್ದೆಗೆ ಸಂಬಂಧಿಸಿದ ಸೇವೆಯನ್ನು ಬಾಹ್ಯಮೂಲಗಳಿಂದ ಭರ್ತಿ ಮಾಡಿದ ವ್ಯಕ್ತಿಗಳಿಂದ ಪಡೆದುಕೊಳ್ಳಲಾಗಿದೆ.

**(B) Details of employees retired during the calendar year 2011**

During the calendar year 2011, 64 officers/officials of the Department have retired on superannuation, 02 officials on voluntary retirement grounds and 02 officials have expired.

**(C) Details of the posts filled by outsourcing during the calendar year 2011.**

The government had instructed to fill the vacant posts of typist, Driver and Group “D” employees by out sourcing and not by direct recruitment. Permission was granted by the government to fill a total of 42 posts of typist, Driver, and group “D” employees among the vacant posts by outsourcing method and also permission has been accorded to meet the expenditure in this regard under "General Expenditure" Head of the Budget released to this department. Among this permission, 35 typists, 03 drivers, and 04 group ``D” employees services are filled from the out soursing agencies during the calendar year 2011.

**ಸಿಬ್ಬಂದಿಯ ವರ್ಗಾವಾರು ಹುದ್ದೆಗಳ ವಿವರ ದಿನಾಂಕ 31-12-2011 ರ ಅಂತ್ಯಕ್ಕೆ ಈ ಕೆಳಗಿನಂತಿರುತ್ತದೆ.**

| ಕ್ರಮ ಸಂಖ್ಯೆ | ವೃಂದ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| 1 | ನಿರ್ದೇಶಕರು | 1 | 1 | 0 |
| 2 | ಜಂಟಿ ನಿರ್ದೇಶಕರು, ನಿಯತ | 4 | 4 | 0 |
| 3 | ಜಂಟಿ ನಿರ್ದೇಶಕರು, ನಿಯಮ 441 | 6 | 4 | 2 |
| 4 | ಉಪ ನಿರ್ದೇಶಕರು, ನಿಯತ | 33 | 32 | 1 |
| 5 | ಉಪ ನಿರ್ದೇಶಕರು, ನಿ–441 | 7 | 4 | 3 |
| 6 | ಸಹಾಯಕ ನಿರ್ದೇಶಕರು, ನಿಯತ | 59 | 53 | 6 |
| 7 | ಸಹಾಯಕ ನಿರ್ದೇಶಕರು, ನಿಯಮ 441 | 36 | 21 | 15 |
| 8 | ಹಿರಿಯ ಲೆಕ್ಕಪರಿಶೋಧಕರು, ನಿಯತ | 297 | 253 | 44 |
| 9 | ಹಿರಿಯ ಲೆಕ್ಕಪರಿಶೋಧಕರು, ನಿಯಮ 441 | 84 | 52 | 32 |
| 10 | ಲೆಕ್ಕಪರಿಶೋಧಕರು, ನಿಯತ | 558 | 226 | 332 |
| 11 | ಲೆಕ್ಕಪರಿಶೋಧಕರು, ನಿ–441 | 12 | 1 | 11 |
| 12 | ಪ್ರಥಮ ದರ್ಜೆ ಸಹಾಯಕರು | 141 | 57 | 84 |
| 13 | ದ್ವಿತೀಯ ದರ್ಜೆ ಸಹಾಯಕರು | 83 | 72 | 11 |
| 14 | ಶೀಘ್ರಲಿಪಿಗಾರರು | 8 | 7 | 1 |
| 15 | ಬೆರಳಚ್ಚುಗಾರರು | 87 | 43 | 44 |
| 16 | ವಾಹನ ಚಾಲಕರು | 20 | 6 | 14 |
| 17 | ದಫೇದಾರರು | 3 | 2 | 1 |
| 18 | ಡಿ ದರ್ಜೆ ನೌಕರರು | 219 | 164 | 55 |
|  | **ಒಟ್ಟು** | **1658** | **1002** | **656** |


ADMINISTRATIVE SETUP / ಆಡಳಿತ ವ್ಯವಸ್ಥೆ
Hon'ble Minister for Cooperation / ಮಾನ್ಯ ಸಹಕಾರ ಸಚಿವರು
Government Secretary / ಸರ್ಕಾರದ ಕಾರ್ಯದರ್ಶಿ
HEAD OF THE DEPARTMENT DIRECTOR / ನಿರ್ದೇಶಕರು
HEAD OFFICE / ಕೇಂದ್ರ ಕಛೇರಿ
DEPUTY DIRECTOR / ಉಪ ನಿರ್ದೇಶಕರು (30 DISTRICTS)
JD(EST)/ಜಂಟಿ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ)
JD(AUDIT) / ಜಂಟಿ ನಿರ್ದೇಶಕರು (ಲೆಪ–೧)
JD(AUDIT) / ಜಂಟಿ ನಿರ್ದೇಶಕರು (ಲೆಪ–೨)
JD(CELL) / ಜಂಟಿ ನಿರ್ದೇಶಕರು (ತಪಫ)
ASSISTANT DIRECTOR / ಸಹಾಯಕ ನಿರ್ದೇಶಕರು (50 SUBDIVISIONS)
DD(EST) / ಉಪ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ)
DD(AUDIT) / ಉಪ ನಿರ್ದೇಶಕರು (ಲೆಕ್ಕಪರಿಶೋಧನೆ)
DD(CELL) / ಉಪ ನಿರ್ದೇಶಕರು (ತಪಫ)
SENIOR AUDITOR / ಹಿರಿಯ ಲೆಕ್ಕಪರಿಶೋಧಕರು (125 TALUKS)
ADA(EST) / ಸನಿ(ಸಿಬ್ಬಂದಿ)
ADA (A /C) / ಸನಿ(ಲೆಕ್ಕ)
ADA (AUDIT1&2) / ಸನಿ(ಲೆಪ೧ ಮತ್ತು ೨)
ADA (AUDIT FEE) / ಸನಿ(ಲೆಪ ಶುಲ್ಕ)
ADA(Cell 1, 2 & 3) / ಸನಿ(ತಪಫ–೧, ೨ ಮತ್ತು ೩)
AUDIT STAFF ಲೆಕ್ಕಪರಿಶೋಧನಾ ಸಿಬ್ಬಂದಿ
SUB STAFF ಅಧೀನ ಸಿಬ್ಬಂದಿ
SUB STAFF ಅಧೀನ ಸಿಬ್ಬಂದಿ
SUB STAFF ಅಧೀನ ಸಿಬ್ಬಂದಿ
SUB STAFF ಅಧೀನ ಸಿಬ್ಬಂದಿ
SUB STAFF ಅಧೀನ ಸಿಬ್ಬಂದಿ

| | |
|---|---|
| **(ಡಿ) ತರಬೇತಿ ವಿವರ:**<br>2011 ನೇ ವರ್ಷದಲ್ಲಿ 60 ನೌಕರರನ್ನು ಕೇಂದ್ರ ಕಛೇರಿಯ ಸಿಬ್ಬಂದಿ ಶಾಖೆಯಿಂದ ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು, ಇಲ್ಲಿಗೆ ತರಬೇತಿಗೆ ನಿಯೋಜಿಸಲಾಗಿರುತ್ತದೆ. | **Training Details:**<br>During the year 2011, 60 officials of the Head Office are deputed for training to the District Training Institute, Bangalore. |
| **(ಜಿ) ಶಿಸ್ತುಪ್ರಕರಣದ ವಿವರ:**<br>2011 ನೇ ಕ್ಯಾಲೆಂಡರ್ ವರ್ಷದಲ್ಲಿ 104 ಶಿಸ್ತು ಪ್ರಕರಣಗಳಲ್ಲಿ 54 ಪ್ರಕರಣಗಳು ಇತ್ಯರ್ಥವಾಗಿರುತ್ತದೆ. ಉಳಿದ 50 ಶಿಸ್ತು ಪ್ರಕರಣಗಳಲ್ಲಿ 17 ಪ್ರಕರಣಗಳು ಅಧಿಕಾರಿಗಳಿಗೆ ಸಂಬಂಧಿಸಿದ್ದು, 33 ಪ್ರಕರಣಗಳು ಸಿಬ್ಬಂದಿಗಳಿಗೆ ಸಂಬಂಧಿಸಿದ್ದಾಗಿರುತ್ತದೆ. | **Details of the Disciplinary Enquiries:**<br>Out of 104 cases pending during the calendar year 2011, 54 cases are disposed, 50 cases are pending for disposal at the end of the year. Out of 50 cases 17cases pertain to the A & B cadre & 33 cases pertain to the C & D cadre officials. |
| **ಮಾಹಿತಿ ಹಕ್ಕು ಕಾಯಿದೆ 2005 ರಂತೆ ಸ್ವೀಕೃತವಾದ ಪ್ರಕರಣಗಳ ವಿಲೇವಾರಿ ವಿವರ:**<br>2011 ನೇ ವರ್ಷದ ಪ್ರಾರಂಭದಲ್ಲಿ 05 ಪ್ರಕರಣಗಳು ವಿಲೇವಾರಿಗೆ ಬಾಕಿಯಾಗಿದ್ದು, ವರದಿ ವರ್ಷದಲ್ಲಿ 217 ಪ್ರಕರಣಗಳು ಸ್ವೀಕೃತವಾಗಿದ್ದು, ಒಟ್ಟು 220 ಪ್ರಕರಣಗಳನ್ನು ವಿಲೇವಾರಿ ಮಾಡಿದ್ದು, ವರ್ಷಾಂತ್ಯಕ್ಕೆ 02 ಪ್ರಕರಣಗಳು ವಿಲೇವಾರಿಗೆ ಬಾಕಿಯಾಗಿರುತ್ತದೆ. ವರದಿ ವರ್ಷದಲ್ಲಿ ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಮಾಹಿತಿ ನೀಡಿದ ಸಂಬಂಧ ಒಟ್ಟು ` 14,883/- ಗಳನ್ನು ವಸೂಲಾತಿ ಮಾಡಿ, ಸರ್ಕಾರಕ್ಕೆ ಭರಣ ಮಾಡಲಾಗಿದೆ. | **Details of the disposal of cases received as per Right to Information Act 2005:**<br>A total of 5 cases are pending at the beginning of the year 2011. During the year 217 cases are received & 220 cases are disposed off, at the end of the year a total 02 cases are pending for disposal. During the year a total of ` 14,883/- are collected for providing information & it has been remitted to the Government. |

| | |
|---|---|
| **ಹಣಕಾಸು ಮತ್ತು ಆಯವ್ಯಯ :**<br>ಈ ಇಲಾಖೆಯಲ್ಲಿನ ವೆಚ್ಚಗಳು ಲೆಕ್ಕ ಶೀರ್ಷಿಕೆ "2425–ಸಹಕಾರ–101–ಸಹಕಾರ ಸಂಘಗಳ ಲೆಕ್ಕಪರಿಶೋಧನೆ–01–ಸಿಬ್ಬಂದಿ (ಯೋಜನೇತರ)" ಅಡಿಯಲ್ಲಿ ಭರಿಸಲಾಗುತ್ತಿದೆ.<br><br>ಇಲಾಖೆಯಲ್ಲಿರುವ ತನಿಖೆ ಮತ್ತು ಪರಿಶೀಲನಾ ಘಟಕದ ಅಧಿಕಾರಿ/ಸಿಬ್ಬಂದಿ ಹಾಗೂ ವಾಹನ ಚಾಲಕರ ವೇತನ ಹಾಗೂ ಭತ್ಯೆಗಳನ್ನು ಯೋಜನೆಯಡಿ ಭರಿಸಲಾಗುತ್ತಿದೆ. ಇಲಾಖೆಯಲ್ಲಿ ಕೇಂದ್ರ/ರಾಜ್ಯ ಪುರಸ್ಕೃತ ಅಭಿವೃದ್ಧಿ ಕಾರ್ಯಕ್ರಮಗಳಿರುವುದಿಲ್ಲ. ಅಂತೆಯೇ ಯೋಜನೆಗಳ ಅನುಷ್ಠಾನ ಕುರಿತಂತೆ ಭೌತಿಕ ಗುರಿಯನ್ನು ನಿಗದಿಪಡಿಸಿರುವುದಿಲ್ಲ.<br><br>ಕಳೆದ ಮೂರು ವರ್ಷಗಳಲ್ಲಿ ಯೋಜನೇತರ ಹಾಗೂ ಯೋಜನಾ ವೆಚ್ಚಗಳಡಿಯಲ್ಲಿ ಹಾಗೂ ಆರ್ಥಿಕ ವರ್ಷ 2011–12 ರಲ್ಲಿ ಮಾಡಲಾದ ವೆಚ್ಚಗಳ ವಿವರ ಈ ಕೆಳಗಿನಂತಿದೆ. | **Finance and Budget :**<br>The expenditure of this department is being met under non-plan under head of account "2425-Co-operation -101-Co-operative Audit-01establishment (Non plan)"<br><br>The expenditure of salary and allowances of the officer/staff of Investigation and Verification Cell functioning in this Department is met under Plan Scheme. Central/State sponsered schemes are not there in this Department. Physical target is nill as the Plan Scheme relates to meeting up of salary and allowances of officer/ staff under Plan Scheme.<br><br>Details of expenditure of the past three years under non-plan scheme along with the expenditure of the financial year 2011-12 is furnished here under. |

| Sl No. ಕ್ರ.ಸ | Year/ ವರ್ಷ | Non-plan/ ಯೋಜನೇತರ (`.in lakhs) | | Plan/ಯೋಜನೆ (`.in lakhs) | |
|---|---|---|---|---|---|
| | | Budget Provision/ ಬಜೆಟ್ ಅವಕಾಶ | Expenditure / ವೆಚ್ಚ | Budget Provision/ ಬಜೆಟ್ ಅವಕಾಶ | Expenditure / ವೆಚ್ಚ |
| 01 | 2008-09 | 2675.35 | 2555.35 | 47.93 | 40.34 |
| 02 | 2009-10 | 2673.87 | 2730.69 | 49.32 | 39.95 |
| 03 | 2010-11 | 2994.17 | 2921.46 | 55.18 | 44.41 |
| 04 | 2011-12 | 3439.15 | 3208.95 | 70.00 | 64.06 |
| | | | | | |

**ಆಧುನೀಕರಣ**:

ಇಲಾಖೆಯನ್ನು ಆಧುನೀಕರಣಗೊಳಿಸುವ ನಿಟ್ಟಿನಲ್ಲಿ ಇ–ಆಡಳಿತವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಇಲಾಖೆಯ ಎಲ್ಲಾ ಜಿಲ್ಲಾ ಕಛೇರಿಗಳಿಗೆ ಗಣಕಯಂತ್ರಗಳನ್ನು ಒದಗಿಸಲಾಗಿದೆ. ಅಲ್ಲದೆ ಇ–ಆಡಳಿತ ಇಲಾಖೆಯಿಂದ 50 ಉಪ ವಿಭಾಗೀಯ ಕಛೇರಿಗಳಿಗೆ ಹೆಚ್.ಆರ್.ಎಂ.ಎಸ್. ಸ್ಕೀಮ್ ಅಳವಡಿಸಲು ಗಣಕಯಂತ್ರಗಳನ್ನು ಒದಗಿಸಲಾಗಿದೆ. ಇದೀಗ ಇಲಾಖೆಯ ಎಲ್ಲಾ ಜಿಲ್ಲಾ ಕಛೇರಿ ಹಾಗೂ ಉಪ ವಿಭಾಗೀಯ ಕಛೇರಿಗಳಿಗೆ ಅಂತರ್ಜಾಲ ಸಂಪರ್ಕವನ್ನು ಒದಗಿಸಲಾಗಿದೆ.

**Modernization:**

e-governance is being implemented to modernize this department. Computers have been provided to all district offices. The e-governance department has supplied computers to all sub-divisional offices to implement HRMS scheme. Internet facility is provided to all district and sub-divisional offices.

## ಅಧ್ಯಾಯ-4

## CHAPTER-4

| ಲೆಕ್ಕ ಪರಿಶೋಧನೆ : | Audit: |
|---|---|
| ಇಲಾಖೆಯ ಮಾನವ ಸಂಪನ್ಮೂಲವು ನಿರಂತರವಾಗಿ ಇಳಿಮುಖವಾಗುತ್ತಿದ್ದಾಗ್ಯೂ 2011-12 ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಇರುವ ಒಟ್ಟು 35628 ಸಹಕಾರ ಸಂಘಗಳ ಪೈಕಿ 28709 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಪೂರೈಸಲಾಗಿರುತ್ತದೆ.<br><br>ಹಿರಿಯ ಲೆಕ್ಕಪರಿಶೋಧಕರ, ಲೆಕ್ಕಪರಿಶೋಧಕರ ಹೆಚ್ಚಿನ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದುದರಿಂದ ಲೆಕ್ಕಪರಿಶೋಧನೆಗೆ ಇರುವ ಎಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಇಲಾಖೆಯ ವತಿಯಿಂದ ಮಾಡಲು ಸಾಧ್ಯವಾಗಿರುವುದಿಲ್ಲ. | In spite of depleting man- power of the department, 28709 Co-operative societies have been audited in the year 2011-12 out of 35628 Co-operative societies for audit.<br><br>As large number of vacancies in the cadre of Senior auditor and Auditor has resulted in non-coverage of audit of all the societies by the department. |

**Progress of audit for the last four years including the current year is as follows / ಪ್ರಸಕ್ತ ವರ್ಷವೂ ಸೇರಿದಂತೆ ಕಳೆದ ನಾಲ್ಕು ವರ್ಷಗಳ ಲೆಕ್ಕಪರಿಶೋಧನಾ ಪ್ರಗತಿ ವಿವರಗಳು ಈ ಕೆಳಕಂಡಂತಿರುತ್ತವೆ.**

| Sl. No. | Year/ ವರ್ಷ | No.of Co-op Societies for audit / ಲೆಕ್ಕಪರಿಶೋಧನೆ ಮಾಡಬೇಕಾಗಿದ್ದ ಸಂಸ್ಥೆಗಳು | No of Co-op Societies audited/ ಲೆಕ್ಕಪರಿಶೋಧನೆಯಾಗಿರುವ ಸಂಸ್ಥೆಗಳು | Balance/ ಉಳಿಕೆ | Percentage of Audit/ ಶೇಕಡವಾರು |
|---|---|---|---|---|---|
| 1 | 2008-09 | 33515 | 21869 | 11646 | 65.25 |
| 2 | 2009-10 | 34352 | 25141 | 9211 | 73.19 |
| 3 | 2010-11 | 35069 | 27845 | 7224 | 80.00 |
| 4 | 2011-12 | 35628 | 28709 | 6919 | 80.57 |


40000
35000
30000
25000
20000
15000
10000
5000
0
33515
21869
11646
65.25
34352
25141
9211
73.19
35069
27845
7224
80
35628
28709
6919
80.57
2008-09
2009-10
2010-11
2011-12
Audit
Audited
Balance
Percentage

**ಟಿಪ್ಪಣಿ :**

ವರ್ಷದಿಂದ ವರ್ಷಕ್ಕೆ ಹೊಸದಾಗಿ ನೋಂದಣಿಯಾಗುತ್ತಿರುವ ಸಹಕಾರ ಸಂಘಗಳ ಸಂಖ್ಯೆ ಏರಿಕೆಯಾಗುತ್ತಿದೆ. 2008–09ನೇ ಸಾಲಿನಲ್ಲಿದ್ದ ಸಹಕಾರ ಸಂಘಗಳ ಸಂಖ್ಯೆಯು 33515 ಗಳಾಗಿದ್ದು, 2011–12 ನೇ ಸಾಲಿಗೆ 35628 ಕ್ಕೆ ಏರಿಕೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ತೀವ್ರ ಸಿಬ್ಬಂದಿ ಕೊರತೆ ಇದ್ದಾಗ್ಯೂ ಸಹಾ 28709 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಪೂರೈಸಲಾಗಿರುತ್ತದೆ. ಕಳೆದ ಸಾಲಿಗಿಂತ 864 ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಹೆಚ್ಚುವರಿಯಾಗಿ ನಿರ್ವಹಿಸಿದ್ದು, ಹೆಚ್ಚಾದ ಸಹಕಾರ ಸಂಘಗಳಿಗೆ ಪರಿಗಣಿಸಿದಾಗ ಹಿಂದಿನ ಸಾಲಿಗಿಂತ 2011–12 ನೇ ಸಾಲಿನಲ್ಲಿ ಹೆಚ್ಚುವರಿ ಪ್ರಗತಿ ಸಾಧಿಸಲಾಗಿದೆ. ಇಲಾಖೆಯು ಉತ್ತಮ ಪ್ರಗತಿ ಸಾಧಿಸಲು ಹಾಗೂ ಗರಿಷ್ಟ ಲೆಕ್ಕಪರಿಶೋಧನೆಯನ್ನು ಕಾಯ್ದುಕೊಳ್ಳಲು ಪೂರ್ಣ ಪ್ರಮಾಣದಲ್ಲಿ ಶ್ರಮಿಸುತ್ತಿದೆ.

2011–12 ರ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಬೀದರ್, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಫಲಿತಾಂಶ ಚೌಕಟ್ಟು ದಾಖಲೆ ವ್ಯಾಪ್ತಿಗೆ ಒಳಪಡಿಸಿ ಶೇಕಡ 100ರಷ್ಟು ಲೆಕ್ಕಪರಿಶೋಧನಾ ಪ್ರಗತಿ ಸಾಧಿಸಲಾಗಿದೆ.

ಸಹಕಾರ ಸಂಘಗಳ 'ಬಾಕಿ ಲೆಕ್ಕಪರಿಶೋಧನೆ'ಗೆ ಒತ್ತು ನೀಡಿ, ಲೆಕ್ಕಪರಿಶೋಧನೆ ಬಾಕಿ ಉಳಿದಿದ್ದ 7224 ಸಹಕಾರ ಸಂಘಗಳ ಪೈಕಿ 1533 ಬಾಕಿ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸಲಾಗಿದೆ. ಪ್ರತಿ ವರ್ಷದ ಲೆಕ್ಕಪರಿಶೋಧನೆ ಒಂದು ಘಟಕದಂತೆ 6597 ಲೆಕ್ಕಪರಿಶೋಧನಾ ಘಟಕಗಳ ಲೆಕ್ಕಪರಿಶೋಧನೆ ಯನ್ನು ಪೂರೈಸಲಾಗಿದೆ.

2011–12ನೇ ಸಾಲಿನಲ್ಲಿ ಲೆಕ್ಕಪರಿಶೋಧನಾ ವೇಳೆಯಲ್ಲಿ 112 ಪ್ರಕರಣಗಳಲ್ಲಿ ` 564.20 ಲಕ್ಷಗಳ ದುರುಪಯೋಗವನ್ನು ಪತ್ತೆ ಹಚ್ಚಲಾಗಿದೆ

**Note:**

On account of registration of new societies every year, the number of societies is increasing. The total number of societies for audit has risen from 33515 in 2008-09 to 35628 by 2011-12. During the current year 28709 Co-operative societies were audited, Inspite of severe shortage of audit personnel, 864 more societies have been audited compared to previous year. For the increased number of societies has been achieved in excess compared to the progress of the previous year. The department is making all-out efforts to achieve and maintain maximum audit progress.

During the year 2011-12, 100% audit progress has been achieved in 9 districts, which are included under Result Frame Work Document, Bangalore Rural, Chikkamagalur, Kodagu, Dakshina Kannada, Udupi, North Canara, Bellary, Bidar and Koppal.

Emphasis has been given for arrears audit out of 7224 arrears societies, audit of 1533 arrear societies accounting for 6597 audit units have been conducted, where each unit is an audit of one year.

DURING AUDIT, MISSAPPROPRIATION OF ` 564.20 LAKHS HAS BEEN DETECTED IN 112 CASES.

**ಹಣ ದುರುಪಯೋಗದ ವಿವರ :**

ಲೆಕ್ಕಪರಿಶೋಧನಾ ವೇಳೆಯಲ್ಲಿ ಕಂಡು ಹಿಡಿಯಲಾದ ಹಣ ದುರುಪಯೋಗಗಳನ್ನು ಆಯಾ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲಾಗಿರುತ್ತದೆ.

2011–12 ನೇ ಸಾಲು ಸೇರಿದಂತೆ ಕಳೆದ ಮೂರು ವರ್ಷಗಳಲ್ಲಿ ಪತ್ತೆ ಹಚ್ಚಲಾದ ದುರುಪಯೋಗದ ವಿವರಗಳು ಈ ಕೆಳಕಂಡಂತಿವೆ.

## Misappropriation Cases:

Cases of misappropriation detected in the course of audit are being reported in the audit reports of the particular year.

Particulars of number of cases of misappropriation so detected during the last three years including 2011-12 and the amount involved are furnished here under.

| Sl. No. ಕ್ರಮ ಸ0ಖ್ಯೆ | Year / ವರ್ಷ | No. of Cases/ ಪ್ರಕರಣಗಳ ಸ0ಖ್ಯೆ | amount `. in lakhs)/ ಮೊತ್ತ (`.ಲಕ್ಷಗಳಲ್ಲಿ) |
|---|---|---|---|
| 1 | 2009-2010 | 104 | 663.30 |
| 2 | 2010-2011 | 253 | 1,218.22 |
| 3 | 2011-2012 | 112 | 564.20 |



# ಅಧ್ಯಾಯ–5

# CHAPTER-5

**ಇಲಾಖೆಯ ಆದಾಯ (` ಲಕ್ಷಗಳಲ್ಲಿ):**

ಇಲಾಖೆಯಿಂದ ಲೆಕ್ಕಪರಿಶೋಧನೆಯಾದ ಸಹಕಾರ ಸಂಘಗಳಿಂದ ಲೆಕ್ಕಪರಿಶೋಧನಾ ಶುಲ್ಕವನ್ನು ವಸೂಲಿ ಮಾಡುತ್ತಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 441 ರನ್ವಯ ಲೆಕ್ಕಪರಿಶೋಧನಾ ಅಧಿಕಾರಿ / ಸಿಬ್ಬಂದಿಯವರ ಸೇವೆಯನ್ನು ಪಡೆಯುತ್ತಿರುವ ಸಹಕಾರ ಸಂಸ್ಥೆಗಳಿಂದ ಲೆಕ್ಕಪರಿಶೋಧನಾ ವೆಚ್ಚವನ್ನು ವಸೂಲಿ ಮಾಡಲಾಗುತ್ತಿದೆ.

ಕಳೆದ ಎರಡು ವರ್ಷಗಳ ಲೆಕ್ಕಪರಿಶೋಧನಾ ಶುಲ್ಕ ಹಾಗೂ ವೆಚ್ಚ, ತಗಾದೆ, ವಸೂಲಾತಿ ಮತ್ತು ಬಾಕಿಯ ವಿವರಗಳು, 2011–12ನೇ ಸಾಲಿನ ವಿವರಗಳೊಂದಿಗೆ ಈ ಕೆಳಕಂಡಂತೆ ನೀಡಲಾಗಿದೆ.

**Departmental Revenue (` in lakhs) :**

The department is collecting audit fee from the co-operative societies, which are audited. The department is collecting audit cost from the co-operative Institutions, where the institutions have availed the services of the departmental personnel under Rule 441 of Karnataka Civil service rules, for conducting the audit of accounts of the said institution.

Particulars of Demand, Collection and Balance of Audit fee and Audit cost for last two years along with particulars for the year the current year 2011-12 is given as under.

## The total figures of demand and collection of revenue during 2009-10 to 2011-12 is as follows ( ` In lakhs/` ಲಕ್ಷಗಳಲ್ಲಿ)

| ಕ್ರಮ ಸ೦ಖ್ಯೆ | Year/ವರ್ಷ | Opening Balance/ ಪ್ರಾರಂಭದ ಬಾಕಿ | Demand during the year/ತಗಾದೆ | Total Demand/ ಒಟ್ಟು ತಗಾದೆ | Collection during the year/ ವಸೂಲಿ | Written off/ ಮನ್ನಾ | Balance/ ಬಾಕಿ | Percentage/ ಶೇಕಡವಾರು |
|---|---|---|---|---|---|---|---|---|
| 1 | 2009–2010 | 1131.45 | 3381.52 | 4512.97 | 3284.22 | 0.10 | 1228.65 | 72.77% |
| 2 | 2010–2011 | 1228.65 | 3498.52 | 4727.17 | 3400.21 | 0.34 | 1326.62 | 71.93% |
| 3 | 2011–2012 | 1326.62 | 4292.12 | 5618.74 | 3702.40 | 0.27 | 1916.34 | 65.89% |


6000
5000
4000
3000
2000
1000
0
1131.45
3381.52
4512.97
3284.22
0.1
1228.65
72.77%
1228.65
3498.52
4727.17
3400.21
0.34
1326.62
71.93%
1326.62
4292.12
5618.74
3702.4
0.27
1916.34
65.89%
2009-10
2010-11
2011-12
Opening Balance
Demand
Total Demand
Collection
written off
Balance
Percentage

# ಅಧ್ಯಾಯ–6
# CHAPTER-6

**ತನಿಖೆ ಮತ್ತು ಪರಿಶೀಲನಾ ಘಟಕ :**

ತನಿಖೆ ಮತ್ತು ಪರಿಶೀಲನಾ ಘಟಕವು ಮೇ 1995 ರಿಂದ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಘಟಕದ ಮುಖ್ಯ ಕಾರ್ಯ ಚಟುವಟಿಕೆಗಳೆಂದರೆ:

1. ಲೆಕ್ಕಪರಿಶೋಧನೆ ಆದ ನಂತರದ ದೂರುಗಳ ವಿಲೇವಾರಿ, ಇದಕ್ಕೆ ಅನ್ವಯಿಸುವಂತೆ ಅಗತ್ಯವೆನಿಸಿದ ಪ್ರಕರಣಗಳಲ್ಲಿ ಸಹಕಾರ ಸಂಸ್ಥೆಗಳ ಪರಿಶೋಧಿತ ಲೆಕ್ಕಪುಸ್ತಕಗಳ ಮರುಪರಿಶೀಲನೆ: ಮರು ತನಿಖೆಗೆ ವ್ಯವಸ್ಥಿಸಿ, ದೃಢಪಡುವ ಅಂಶಗಳು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಕಲಂ 63(11) ರನ್ವಯ ಆದೇಶಗಳನ್ನು ಹೊರಡಿಸುವುದು.
2. ಸಹಕಾರ ಸಂಘಗಳಿಂದ ದುರುಪಯೋಗದ ಅವ್ಯವಹಾರಗಳ ಬಗ್ಗೆ ದೂರು ಬಂದರೆ ಅವುಗಳ ಪರಿಶೀಲನೆ ಕೈಗೊಳ್ಳುವುದು.
3. ಲೆಕ್ಕಪರಿಶೋಧನಾ ವರದಿಯಲ್ಲಿನ ಯಾವುದೇ ಆಕ್ಷೇಪಗಳನ್ನು ಕೈಬಿಡುವಂತೆ ಕೋರಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲ63(8) ರಡಿ ಸಲ್ಲಿಕೆ ಯಾಗುವ ಮೇಲ್ಮನವಿಗಳ ವಿಲೇವಾರಿ.
4. ಕಲಂ 109 ಕ್ಕೆ ಸಂಬಂಧಿಸಿ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಇಲಾಖೆಯಿಂದ ನಿರ್ವಹಿಸಬೇಕಾದ ಕ್ರಮ ಹಾಗೂ ಕಲಂ 111(2) (ಎ) ರನ್ವಯ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿ ನೀಡುವ ಕ್ರಮಗಳು.

**Investigation and verification Cell:**

The Investigation and Verification Cell, is functioning under the "Plan Scheme" since May 1995.

The main functions of the Cell are:-

1. Verification of "Post audit" complaints, received regarding irregularities let out in the Audit and to arrange to re-verify / reexamine the audited accounts of any cooperative society and to order to incorporate such lapses in the next audit report under the provisions of Section 63(11) of the Karnataka Co-operative Societies Act 1959.
2. Verification of Complaints received regarding misappropriation of funds of Co-operative Societies.
3. Disposal of appeals filed under Section 63(8) of the Karnataka Co-operative Societies Act 1959 for deletion of any item held under objection in the audit report.
4. To examine and to accord permission under section 111 (2) (a) of the Act, for prosecution, with regard to offences listed in section 109.

| | |
|---|---|
| 5. ಇಲಾಖೆಯ ಅಧೀನ ಕಛೇರಿಗಳ ಪರಿವೀಕ್ಷಣೆಗಳನ್ನು ಕೈಗೊಳ್ಳುವ ಬಗ್ಗೆ ವ್ಯವಸ್ಥೆ ಮಾಡುವುದು ಹಾಗೂ ಸಂಬಂಧಿಸಿದವರಿಂದ ಅನುಪಾಲನಾ ವರದಿಗಳನ್ನು ಪಡೆಯುವಲ್ಲಿ ಅನುಸರಣಾ ಹಿಂಬಾಲಿಕೆಯ ಕ್ರಮ.<br><br>6. ಮಹಾಲೇಖಪಾಲರಿಂದ:ಸರ್ಕಾರದಿಂದ: ಇತರೇ ಉನ್ನತ ಅಧಿಕಾರಿಗಳು ನಡೆಸಿದ ಪರಿವೀಕ್ಷಣಾ ವರದಿಗಳಿಗೆ ಸಂಬಂಧಿಸಿದ ಅನುಸರಣಾ ವರದಿಗಳನ್ನು ಪಡೆದು ಸೂಕ್ತವಾಗಿ ವಿಲೇವಾರಿ ಮಾಡುವುದು.<br><br>7. ಇಲಾಖೆಯ ಅಧಿಕಾರಿ ಹಾಗೂ ಲೆಕ್ಕಪರಿಶೋಧನಾ ಸಿಬ್ಬಂದಿಗಳಿಗೆ ಅಗತ್ಯವಾದ ತರಬೇತಿ ಹಾಗೂ ಮಾರ್ಗದರ್ಶನಗಳನ್ನು ನೀಡುವುದರ ಮೂಲಕ ತಹಲ್‌ವರೆಗಿನ ಮಾಹಿತಿಗಳೊಂದಿಗೆ ಕೆಲಸ ಕಾರ್ಯಗಳ ಗುಣಮಟ್ಟ ಸುಧಾರಣೆ ಮಾಡುವುದು.<br><br>8. ಸರ್ಕಾರದ ಧ್ಯೇಯಗಳಿಗನುಗುಣವಾಗಿ ಈ ಘಟಕವು ಸಾರ್ವಜನಿಕ ಕುಂದುಕೊರತೆ ವಿಭಾಗವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಂದ ಹಾಗೂ ಇಲಾಖಾ ಸಿಬ್ಬಂದಿಯಿಂದ ಸ್ವೀಕೃತವಾದ ಕುಂದುಕೊರತೆಗಳ: ಮನವಿಗಳ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಿಡುವುದು.<br><br>ಈ ಶಾಖೆಯು ವಾರ್ಷಿಕ ವರದಿಯ ಅವಧಿಯಲ್ಲಿ ಪಡೆದ ದೂರುಗಳು ಹಾಗೂ ಕಡತಗಳ ವಿಲೇವಾರಿಯಲ್ಲಿ ಸಾಧಿಸಿದ ಪ್ರಗತಿಯ ವಿವರಗಳು ಕೆಳಕಂಡಂತಿವೆ. | 5. To arrange for annual inspection of subordinate offices of the department and arrange to obtain compliance reports from the subordinate offices of the department and follow up of compliance.<br><br>6. To arrange to send compliance reports for the inspection reports received from Accountant General/Government and other Higher Authorities.<br><br>7. To impart necessary training and guidance to the officers and Auditors of the department to update their knowledge and to improve the quality of audit.<br><br>**8.** As a policy of the Government the Enquiry and Inspection cell is also functioning as Public Grievances Cell to redress the grievances of public pertaining to audit of accounts of Co-operative Institutions and staff of the department. |

**ಕಡತ ವಿಲೇವಾರಿ:**

ದಿನಾಂಕ 1-4-2011 ರಿಂದ 31-3-2012 ರವರೆಗಿನ ಕಡತ ವಿಲೇವಾರಿ ಮಾಹಿತಿ

**Disposal of files:**

The particulars of files /complaints received & disposed during the year 1-4-2011 to 31-03-2012 are as under

| **Particulars / ವಿವರಗಳು** | **Opening Balance As on 01-04-11 ಪ್ರಾರಂಭದ ಬಾಕಿ 01–04–2011** | **Complaints Received During the Period / ಹೊಸದಾಗಿ ಪ್ರಾರಂಭ** | **Total ಒಟ್ಟು** | **Disposal During the Period/ ಈ ಸಾಲಿನಲ್ಲಿ ವಿಲೇವಾರಿ** | **Balance As on 31-03-2012ಬಾಕಿ** |
|---|---|---|---|---|---|
| Public grievances/ ಸಾರ್ವಜನಿಕ ಕುಂದುಕೊರತೆ | - | - | - | - | - |
| Others/ ಇತರೆ | 194 | 191 | 385 | 151 | 234 |
| Total/ ಒಟ್ಟು | 194 | 191 | 385 | 151 | 234 |
| 2010-11ನೇ ಸಾಲಿಗೆ | 238 | 148 | 386 | 192 | 194 |
| 2009-2010ನೇ ಸಾಲಿಗೆ | 219 | 159 | 378 | 140 | 238 |

**ತರಬೇತಿಗಳು:**

ಈ ಇಲಾಖೆಯಿಂದ ಉತ್ತಮ ಗುಣಮಟ್ಟದ ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸಲು ಅನುವಾಗುವಂತೆ ಹಾಗೂ ಗಣಕಯಂತ್ರ ನಿರ್ವಹಣೆ ಜ್ಞಾನ ವಿಕಾಸ ಕುರಿತು ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ಪ್ರಸಕ್ತ ಅವಧಿಯಲ್ಲಿ ಈ ಕೆಳಕಂಡ ತರಬೇತಿಯನ್ನು ನೀಡಲಾಗಿದೆ

**Training**

During the period of report, with a view to improve the quality of Audit and audit reports and to increase the knowledge in computer operating, the following training programmes were arranged.

| ಕ್ರಮ ಸಂಖ್ಯೆ | ತರಬೇತಿ | ತರಬೇತಿಯ ದಿನಾಂಕ | ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 1 | ಹೆಚ್.ಆರ್.ಎಂ.ಎಸ್. ತರಬೇತಿ | 27–07–2011 | 60 |
| 2 | ಆರ್.ಎಫ್.ಡಿ. ತರಬೇತಿ | 26–11–2011 | 40 |
| 3 | ಓರಿಯಂಟೇಶನ್ ತರಬೇತಿ | 19–12–2011 ರಿಂದ 24–12–2011 | 40 |
| 4 | ಓರಿಯಂಟೇಶನ್ ತರಬೇತಿ | 27–02–2012 | 60 |

| **Sl. No.** | **Training** | **Date of Training** | **No. of Candidates** |
|---|---|---|---|
| 1 | H.R.M.S. | 27-07-2011 | 60 |
| 2 | R.F.D. | 26-11-2011 | 40 |
| 3 | Orientation | 19-12-2011 to 24-12-2011 | 40 |
| 4 | Orientation | 27-02-2012 | 60 |

Director of Co-operative Audit.